# ಪ್ರಾಮಾಣಿಕತೆಯ ಫಲ

ಒಂದು ಹಳ್ಳಿಯಲ್ಲಿ ಕೃಷಿಯನ್ನೇ ಅವಲಂಬಿಸಿದ್ದ ದೈವಭಕ್ತ ಕುಟುಂಬವಿತ್ತು. ಕುಟುಂಬದ ಯಜಮಾನನಾದ ಆದಿತ್ಯ ತುಂಬಾ ಪ್ರಾಮಾಣಿಕ ವ್ಯಕ್ತಿ. ಅವನು ಕಷ್ಟಪಟ್ಟು ದುಡಿದು, ಒಳ್ಳೆಯ ಬೆಳೆಯನ್ನು ತೆಗೆದು ಜೀವನ ನಡೆಸುತ್ತಿದ್ದನು. ಅವನಿಗೆ ಒಬ್ಬನೇ ಮಗ. ಅವನ ಹೆಸರು ಆನಂದ. ಅತ್ಯಂತ ಪ್ರತಿಭಾನ್ವಿತ ಬಾಲಕನಾಗಿದ್ದ ಅವನು ಶಾಲೆಯಲ್ಲಿ ಓದುತ್ತಿದ್ದನು. ಆದಿತ್ಯನು ಮಗನ ದಿನನಿತ್ಯದ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಿ, ಮಾರ್ಗದರ್ಶನ ಮಾಡುತ್ತಿದ್ದನು. ಇದರಿಂದ ಆನಂದನು ಸದ್ಗುಣಗಳ ಗಣಿಯಾಗಿದ್ದನು.



ಎಲ್ಲವೂ ಸುಸೂತ್ರವಾಗಿ ಸಾಗುತ್ತಿತ್ತು. ಆದರೆ, ಹಲವು ವರ್ಷಗಳ ಕಾಲ ಮಳೆಯಾಗದೇ ಬರಗಾಲದ ಪರಿಸ್ಥಿತಿ ತಲೆದೋರಿತು. ಕೃಷಿಯನ್ನೇ ಅವಲಂಬಿಸಿದ್ದ ಆದಿತ್ಯ ತನ್ನ ಕುಟುಂಬವನ್ನು ನಿರ್ವಹಿಸಲು ಪರದಾಡಬೇಕಾಯಿತು. ಇದೆಲ್ಲವನ್ನೂ ಗಮನಿಸಿದ ಆನಂದ, ಬೇಸಿಗೆಯ ರಜೆಯಲ್ಲಿ ಪಟ್ಟಣದಲ್ಲಿ ದುಡಿಯಲು ಇಚ್ಛಿಸಿದನು. ಆ ಮೂಲಕ ತಂದೆಗೆ ಹೊರೆಯಾಗದೆ, ತನ್ನ ಶಿಕ್ಷಣದ ಖರ್ಚನ್ನು ತಾನೇ ಭರಿಸಲು ಬಯಸಿದನು.

ಆದಿತ್ಯನು ಮಗನನ್ನು ಪಟ್ಟಣದಲ್ಲಿಯ ತನ್ನ ಸ್ನೇಹಿತನ ಮುಖಾಂತರ, ಒಬ್ಬ ಬಟ್ಟೆ ವ್ಯಾಪಾರಿಯ ಹತ್ತಿರ ಕೆಲಸಕ್ಕೆ ಸೇರಿಸಿದನು. ಒಂದು ದಿನ ಒಬ್ಬ ಗೃಹಿಣಿಯು ರೇಷ್ಮೆ ಸೀರೆಯನ್ನು ಕೊಳ್ಳಲು ಬಂದಳು. ಅಂಗಡಿಯಲ್ಲಿ ಕೆಲಸಕ್ಕಿದ್ದ ಆನಂದನು ಆಕೆಗೆ ವಿಧವಿಧವಾದ ರೇಷ್ಮೆ ಸೀರೆಗಳನ್ನು ತೋರಿಸಿದನು. ಗೃಹಿಣಿಯು ತನ್ನ ಮನಸ್ಸಿಗೆ ಒಪ್ಪಿಗೆಯಾದ ಒಂದು ಸೀರೆಯನ್ನು ಪ್ಯಾಕ್ ಮಾಡಲು ಕೊಟ್ಟಳು. ಆನಂದ ಆ ಸೀರೆಯನ್ನು ಮಡಚಿ, ಪ್ಯಾಕ್ ಮಾಡುವಾಗ ಅದರಲ್ಲಿ ಇದ್ದ ಒಂದು ಸಣ್ಣ ದೋಷವನ್ನು ನೋಡಿದನು. ಅವನು ಆ ದೋಷವನ್ನು ಗೃಹಿಣಿಗೆ ತೋರಿಸಿ, "ಅಮ್ಮಾ, ಈ ಸೀರೆಯಲ್ಲಿ ದೋಷವಿದೆ. ದಯವಿಟ್ಟು ಬೇರೆ ಸೀರೆಯನ್ನು ಆರಿಸಿಕೊಳ್ಳಿ" ಎಂದು ವಿನಯದಿಂದ ಹೇಳಿದನು. ಆದರೆ ಆ ಗೃಹಿಣಿಗೆ ಬೇರೆ ಸೀರೆ ಮನಸ್ಸಿಗೆ ಬರಲಿಲ್ಲ. ಆಕೆ ಬೇರೆ ಅಂಗಡಿಗೆ ಹೋಗಲು ನಿರ್ಧರಿಸಿದಳು. ಹೋಗುವ ಮೊದಲು, ಆ ಮುದ್ದು ಬಾಲಕನ ಪ್ರಾಮಾಣಿಕತೆಯನ್ನು ಮೆಚ್ಚಿ, ಅವನ ವಿಷಯವನ್ನೆಲ್ಲಾ ಕೇಳಿ ತಿಳಿದಳು. ಆಕೆಯು ಒಂದು ಪ್ರತಿಷ್ಠಿತ ಶಾಲೆಯಲ್ಲಿ ಅಧ್ಯಾಪಕಿಯಾಗಿದ್ದಳು. ಆಕೆ ಬಾಲಕನಿಗೆ ತನ್ನ ಮನೆಯ ವಿಳಾಸವನ್ನು ನೀಡಿ, ತಂದೆಯೊಂದಿಗೆ ಬಂದು ಕಾಣಲು ತಿಳಿಸಿ, ಹೊರಟುಹೋದಳು.

ಅಂಗಡಿಯ ಮಾಲಿಕನು ಇದೆಲ್ಲವನ್ನೂ ನೋಡಿದನು. ಒಡನೆಯೇ ಆತನು ಬಾಲಕನ ತಂದೆಗೆ ಪತ್ರ ಬರೆದು, "ನಿಮ್ಮ ಮಗನಿಗೆ ವ್ಯಾಪಾರ ಮಾಡುವ ಕಲೆ ತಿಳಿಯದು. ಇವನನ್ನು ಕರೆದುಕೊಂಡು ಹೋಗಿ" ಎಂದು ತಿಳಿಸಿದನು. ಬಾಲಕನ ತಂದೆ ಗಾಬರಿಪಟ್ಟು ಓಡಿಬಂದನು. ವ್ಯಾಪಾರಿಯು ನಡೆದ ಘಟನೆಯನ್ನು ವಿವರಿಸುತ್ತಾ, "ಕೊಳ್ಳುವವರು ತಾವು ಖರೀದಿಸುವ ವಸ್ತುಗಳನ್ನು ಸ್ವತಃ ಪರೀಕ್ಷಿಸಿಕೊಳ್ಳಬೇಕು. ಅವರಿಗೆ ಕಾಣದಿರುವ ದೋಷವನ್ನು ನಾವೇ ತೋರಿಸುವುದು ಮೂರ್ಖತನ" ಎಂದು ಹೇಳಿದನು. ಆದಿತ್ಯನಿಗೆ ಇಂತಹ ಅಪ್ರಾಮಾಣಿಕ ವ್ಯಕ್ತಿಯ ಹತ್ತಿರ ಮಗನನ್ನು ಬಿಟ್ಟು ತಪ್ಪು ಮಾಡಿದೆನೆಂದು ಅನ್ನಿಸಿತು. ಮಗನನ್ನು ಅಲ್ಲಿ ಒಂದು ಕ್ಷಣವೂ ಬಿಡಲು ಇಚ್ಛಿಸದೇ, ಅಲ್ಲಿಂದ ಕರೆದುಕೊಂಡು ಹೋದನು. ಆನಂದನು ಅಂಗಡಿಗೆ ಬಂದಿದ್ದ ಶಾಲಾ ಅಧ್ಯಾಪಕಿಯ ವಿಷಯವನ್ನು ತಂದೆಗೆ ಹೇಳಿದನು. ಅವನ ಇಚ್ಛೆಯಂತೆ ಆದಿತ್ಯನು ತನ್ನ ಮಗನನ್ನು ಕರೆದುಕೊಂಡು ಅಧ್ಯಾಪಕಿಯ ಮನೆಗೆ ಹೋದನು. ಆಕೆಯು ಆನಂದನಿಗೆ ಉತ್ತಮ ಶಿಕ್ಷಣದ ಸೌಲಭ್ಯವನ್ನು ಒದಗಿಸಿ, ವಿದ್ಯಾರ್ಥಿವೇತನದ ವ್ಯವಸ್ಥೆಯನ್ನು ಮಾಡುವ ಭರವಸೆಯನ್ನು ನೀಡಿದಳು. ಆದಿತ್ಯನು ಒಪ್ಪಿ, ಮಗನನ್ನು ಅಧ್ಯಾಪಕಿಯು ಕೆಲಸ ಮಾಡುತ್ತಿದ್ದ ಪ್ರತಿಷ್ಠಿತ ಶಾಲೆಗೆ ಸೇರಿಸಿದನು.

**ಆನಂದನಿಗೆ ಬಟ್ಟೆ ಮಾರುವ ಅಂಗಡಿಯ ಕೆಲಸ ಹೋಯಿತು. ಆದರೆ, ಉತ್ತಮ ಶಾಲೆಯಲ್ಲಿ ಓದುವ ಅವಕಾಶ ಸಿಕ್ಕಿತು. ಇಂಗ್ಲಿಷ್‌ನಲ್ಲಿ ಒಂದು ಮಾತಿದೆ: Honesty Pays - ಪ್ರಾಮಾಣಿಕತೆಯಿಂದ ಲಾಭವೇ ಉಂಟಾಗುವುದು. ಅಲ್ಪ ಸ್ವಲ್ಪ ನಷ್ಟವಾದರೂ ಅದು ತಾತ್ಕಾಲಿಕ. ಭವಿಷ್ಯದಲ್ಲಿ ಒಳ್ಳೆಯದೇ ಆಗುತ್ತದೆ. ಆದ್ದರಿಂದ ಮಕ್ಕಳೇ, ಯಾವತ್ತೂ ಪ್ರಾಮಾಣಿಕರಾಗಿರಿ, ಸತ್ಯವನ್ನೇ ನುಡಿಯಿರಿ. ಇದರಿಂದ ಇಂದು ಕಷ್ಟವಾದರೂ, ಮುಂದೆ ಸುಖವೇ ಸಿಕ್ಕುತ್ತದೆ.**